KAN 102.4 Reg. No. ................................

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಬಿ.ಎಂ. ಮತ್ತು ಬಿಸಿಎ ಪದವಿ ಪರೀಕ್ಷೆ

ಅಕ್ಟೋಬರ್ – 2012

ಕನ್ನಡ ಭಾಷಾ ಪತ್ರಿಕೆ

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಒಂದು ಪದ್ಯದ ಭಾವಾರ್ಥ ವಿವರಿಸಿ, ಅದರ ಸಾಂದರ್ಭಿಕ ಮಹತ್ವವನ್ನು ವಿವೇಚಿಸಿ. 05

1) ಆನುಂ ದುಶ್ಶಾಸನನುಂ !
ನೀನುಂ ಮೂವರೆ ದಲಾತನುಂ ಕಱಿದ ಬಱಿ !!
ಕ್ಕಾನುಂ ನೀನೆ ದಲೀಗಳ !
ನೀನುಮಗಲ್ದೆತ್ತವೋದೆಯಂಗಾಧಿಪತೀ !!

2) ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು;
ಪಾವ್ಗಳಿಗೆ ಪಾಲೆರೆದು ಪೋಷಿಸಾಯ್ತು !
ಬಿಸಿಲು ಮಳೆಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು;
ದಾಸರನು ಪೂಜಿಸಿಯೆ ದಾಸ್ಯವಾಯ್ತು !

ಆ) ಎರಡನ್ನು ಸಂದರ್ಭ, ಸ್ವಾರಸ್ಯದೊಂದಿಗೆ ವಿವರಿಸಿ. 06

1) ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ.

2) ನಿಮ್ಮ ಕಷ್ಟಕೋಟಲೆಗಾಗಿ ಯಾರೂ ಮರುಗುವವರಿಲ್ಲ

3) ಪತಿಗೆ ಪ್ರತಿ ಉತ್ತರ ಕೊಡಬೇಡ ಮಡದಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿ. 10

1) ಕರ್ಣ – ದುರ್ಯೋಧನರ ಸ್ನೇಹದ ಆಳವು ರನ್ನನ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ? ವಿವರಿಸಿ.

2) ಹಿಂಸೆಗೆ ತಗ್ಗದೆ, ಕುಗ್ಗದೆ ತನ್ನ ನಿರ್ಧಾರಕ್ಕೆ ಸಂಕಮ್ಮ ಬದ್ಧಳಾದ ಬಗೆಯನ್ನು ಮಲೆಮಹದೇಶ್ವರ ಕಾವ್ಯ ಹೇಗೆ ವಿವರಿಸುತ್ತದೆ?

ಈ) ಒಂದು ಪ್ರಶ್ನೆಗೆ ಉತ್ತರಿಸಿ. 7

1) ಬೆಳಕಿನ ಕಡ್ಡಿ ಹಚ್ಚುವ ಕೆಲಸ ನಿರಂತರವಾಗಿ ನಡೆಯಬೇಕೆಂಬ ಆಶಯ 'ನನ್ನ ಹಣತೆ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

2) ಪತಿಗಳ ವ್ಯಕ್ತಿತ್ವದ ಔನ್ನತ್ಯಕ್ಕೆ ಏರುಗಂಬಗಳಾದ ಹೆಣ್ಣುಗಳನ್ನು ಕೆ. ಷರೀಫಾ ಏನೆಂದು ಪ್ರಶ್ನಿಸಿದ್ದಾರೆ?

II. ಅ) ಒಂದು ಪ್ರಶ್ನೆಗೆ ಉತ್ತರಿಸಿ. 10

1) ವಿದ್ಯಾರ್ಥಿ ಸಮುದಾಯಕ್ಕೆ ಯಾವ ರೀತಿಯ ಆಹ್ವಾನವನ್ನು ಕುವೆಂಪು ತಮ್ಮ ಲೇಖನದಲ್ಲಿ ನೀಡುತ್ತಾರೆ? ವಿವರಿಸಿ.

2) ಇಂಗ್ಲಿಷ್ ಭಾಷೆಯ ದೆಸೆಯಿಂದ ತೇಜಸ್ವಿಯವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ಪಟ್ಟ ಪಾಡುಗಳೇನು?

ಆ) ಒಂದು ಪ್ರಶ್ನೆಗೆ ಉತ್ತರಿಸಿ. 07

1) 'ಈ ಸಾವು ನ್ಯಾಯವೇ?' ಪ್ರಬಂಧವು ವ್ಯಕ್ತಿ ಆರಾಧನೆಯ ಅಪಾಯಗಳನ್ನು ಹೇಗೆ ಚಿತ್ರಿಸಿದೆ?

2) ಇಂಗ್ಲಿಷ್ ಭಾಷೆಯ ಬಗ್ಗೆ ಕುವೆಂಪುರವರ ನಿಲುವುಗಳೇನು? 'ಇಂಗ್ಲಿಷ್ ಕಾಟ' ಲೇಖನದ ಹಿನ್ನಲೆಯಲ್ಲಿ ಚರ್ಚಿಸಿ.

**III.** ಅ) ಒಂದು ಪ್ರಶ್ನೆಗೆ ಉತ್ತರಿಸಿ. **06**

1) ಮಾತಿನ ಮಹತ್ವ ಮತ್ತು ಮಾತು, ಬರಹಗಳಿಗಿರುವ ವ್ಯತ್ಯಾಸವನ್ನು ವಿವರಿಸಿ.

2) ಕನ್ನಡ ವಾಕ್ಯ ರಚನೆಯನ್ನು ಕುರಿತು ವಿವರಿಸಿ.

ಆ) ಒಂದನ್ನು ಉತ್ತರಿಸಿ. **03**

1) ವಾಕ್ಯಾಂಗ ಎಂದರೇನು?

2) ಕ್ರಿಯಾ ವಾಕ್ಯಗಳು ಎಂದರೇನು?

**IV.** ಅ) ಒಂದು ಪ್ರಶ್ನೆಗೆ ಉತ್ತರಿಸಿ. **10**

1) ರಾಜಮ್ಮನ ಬದುಕಿನ ದುರಂತವನ್ನು 'ಮನುವಿನರಾಣಿ' ಕತೆ ಹೇಗೆ ವಿವರಿಸುತ್ತದೆ?

2) ಮಾರಿಕೊಂಡವರು ಕತೆಯಲ್ಲಿ ವ್ಯಕ್ತಗೊಂಡ ಅಸಹಾಯಕ ಪ್ರತಿಭಟನೆಯ ಸ್ವರೂಪವನ್ನು ಚರ್ಚಿಸಿ.

ಆ) ಒಂದನ್ನು ಉತ್ತರಿಸಿ. **05**

1) 'ಕೊನೆಯ ಗಿರಾಕಿ' ಕತೆಯ ಆಶಯವೇನು?

2) 'ಮನುವಿನ ರಾಣಿ' ಕತೆಯಲ್ಲಿನ ವೈದ್ಯರ ಪಾತ್ರವನ್ನು ವಿಶ್ಲೇಷಿಸಿರಿ.

**V.** ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ. **06**

1) ರನ್ನಕವಿ

2) ಕುವೆಂಪು

3) ನೀಲೇಗೌಡ

ಆ) ಒಂದು ವಾಕ್ಯದಲ್ಲಿ ಉತ್ತರಿಸಿ. **05**

1) 'ಪಾಂಚಜನ್ಯ' ಯಾರ ಕವನಸಂಕಲನ?

2) 'ನಿತ್ಯೋತ್ಸವ'ದ ಕವಿ ಯಾರು?

3) 'ನಿರಂಜನ' ಯಾರ ಕಾವ್ಯನಾಮ?

4) 'ಪರಿಸರದ ಕತೆಗಳು' ಯಾರ ಕೃತಿ?

5) ದೇವನೂರರ ಯಾವ ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ?

**********

KAN 102.4 Reg. No. ................................

ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಬಿ.ಎಂ./ಬಿ.ಸಿ.ಎ. ಪದವಿ ಪರೀಕ್ಷೆ

ಅಕ್ಟೋಬರ್ 2013

ಕನ್ನಡ ಭಾಷಾ ಪತ್ರಿಕೆ – I

ಅವಧಿ: 3 ಗಂಟೆಗಳು ಒಟ್ಟು ಅಂಕಗಳು: 80

I. ಅ) ಪದ್ಯಭಾಗಗಳಲ್ಲಿ ಒಂದರ ಸಂದರ್ಭ ಭಾವಾರ್ಥ ವಿವರಿಸಿ. 5

1) ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು
ಪಾವ್ಗಳಿಗೆ ಪಾಲೆರೆದು ಪೋಷಿಸಾಯ್ತು
ಬಿಸಿಲು ಮಳೆಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೆ ದಾಸ್ಯವಾಯ್ತು!

2) ಜೂಜಿನ ವಸ್ತುವಾಗಿ
ಪತಿಗಳೈವರ ಆಟದಲಿ
ತುಂಬಿದ ಸಭೆಯಲಿ ಸೀರೆ ಸೆಳೆಸಿಕೊಂಡು
ಗಂಡಂದಿರ ಧರ್ಮ ಕಾಯಲು
ಮರುಮಾತಿಲ್ಲದೆ
ಪಣಕ್ಕಿಡಿಸಿಕೊಂಡಿರಲ್ಲೇ

ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ. 6

1) ನೀನಾರ್ಗೆಂದಾರು ಮಱಿಯರಂಗಾಧಿಪತೀ
2) ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ
3) ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) ರನ್ನನ ಕಾವ್ಯಭಾಗದಲ್ಲಿ – ದುರ್ಯೋಧನನು ದುರಂತನಾಯಕನಾಗಿ ಹೇಗೆ ನೆನಪಿನಲ್ಲಿ ಉಳಿಯುತ್ತಾನೆ? ವಿವರಿಸಿ.
2) ಮಲೆಮಹದೇಶ್ವರ ಕಾವ್ಯಭಾಗದಲ್ಲಿ ಸಂಕಮ್ಮ ಹೇಗೆ ದಿಟ್ಟತನವನ್ನು ಮೆರೆದಿದ್ದಾಳೆ? ವಿವರಿಸಿ.

ಈ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: 7

1) ಭಾರತಾಂಬೆಗಿಂತ ಮಿಗಿಲಾದ ದೇವರಿಲ್ಲ ಎಂಬುದನ್ನು ಕವಿ ಕುವೆಂಪು ಹೇಗೆ ಸಾರಿದ್ದಾರೆ? ವಿವರಿಸಿ.
2) ಪುರಾಣ ಪ್ರಸಿದ್ಧ ನಾರಿಯರನ್ನು ಕೆ. ಷರೀಫಾ ಏನೆಂದು ಪ್ರಶ್ನಿಸುತ್ತಾರೆ? ವಿವೇಚಿಸಿ.

II. ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ: 10

1) 'ವಿಚಾರಕ್ರಾಂತಿಗೆ ಆಹ್ವಾನ' ಪ್ರಬಂಧದ ಹಿನ್ನೆಲೆಯಲ್ಲಿ ಕುವೆಂಪು ವಿಚಾರಧಾರೆಯನ್ನು ಕ್ರೋಢೀಕರಿಸಿ ಬರೆಯಿರಿ.
2) ಇಂಗ್ಲೀಷ್‌ನಿಂದಾಗಿ ತೇಜಸ್ವಿಯವರು ಅನುಭವಿಸಿದ ಪಡಿಪಾಟಲು 'ಇಂಗ್ಲಿಷ್‌ಕಾಟ' ಪ್ರಬಂಧದಲ್ಲಿ ಹೇಗೆ ಚಿತ್ರಿತವಾಗಿದೆ?

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. 7

1) ಆರಾಧನೆಯ ಅತಿರೇಕಕ್ಕೂ, ಆರ್ಥಿಕ ಅಸಮಾನತೆಗೂ 'ಈ ಸಾವು ನ್ಯಾಯವೇ?' ಲೇಖನ ಹೇಗೆ ನಂಟು ಬೆಸೆಯುತ್ತದೆ? ವಿವರಿಸಿ.

2) ಭಾಷೆಯ ಬಗೆಗಿನ ಕುವೆಂಪು ಅವರ ದೃಷ್ಟಿಕೋನ 'ಇಂಗ್ಲಿಷ್‌ಕಾಟ' ಪ್ರಬಂಧದಲ್ಲಿ ವ್ಯಕ್ತವಾದ ರೀತಿಯನ್ನು ವಿವರಿಸಿ.

**III.** ಅ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. 10

1) ಮಾನವೀಯತೆ ಇಲ್ಲದ ಸಮಾಜದ ಚಿತ್ರಣ 'ಕೊನೆಯಗಿರಾಕಿ' ಕಲೆಯಲ್ಲಿ ಹೇಗೆ ಬಿಂಬಿತವಾಗಿದೆ? ವಿವರಿಸಿ.

2) 'ಮನುವಿನ ರಾಣಿ' ಕತೆಯು ಹೆಣ್ಣಿನ ಬದುಕಿನ ದುರಂತವನ್ನು ಹೇಗೆ ವ್ಯಕ್ತಗೊಳಿಸುತ್ತದೆ? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ: 5

1) 'ಮಾರಿಕೊಂಡವರು' ಕತೆ ನಮ್ಮ ಮುಂದೆ ತೆರೆದಿಡುವ ಬದುಕನ್ನು ವಿವರಿಸಿ.

2) ಕೊನೆಯ ಗಿರಾಕಿ ಕತೆಯ ಆಶಯವೇನು? ವಿವೇಚಿಸಿ.

**IV.** ಅ) ಒಂದು ಪ್ರಶ್ನೆಗೆ ಉತ್ತರಿಸಿ: 6

1) ಕನ್ನಡ ವಾಕ್ಯರಚನೆಯ ಆಂತರಿಕ ಸ್ವರೂಪವನ್ನು ವಿವರಿಸಿ.

2) ಮಾತಿನ ಪ್ರಮುಖ ಅಂಶಗಳೇನು? ಮಾತು ಮತ್ತು ಬರಹಕ್ಕಿರುವ ವ್ಯತ್ಯಾಸಗಳು ಯಾವುವು?

ಆ) ಒಂದು ಪ್ರಶ್ನೆಗೆ ಉತ್ತರಿಸಿ: 3

1) ಕ್ರಿಯಾ ಸೂಚಕ ವಾಕ್ಯಗಳ ಕುರಿತು ಬರೆಯಿರಿ.

2) ಕಾಲ ಸೂಚಕ ವಾಕ್ಯಗಳ ಕುರಿತು ಬರೆಯಿರಿ.

**V.** ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ: 6

1) ಕೆ. ಎಸ್. ನಿಸಾರ್ ಅಹಮದ್

2) ಪೂರ್ಣಚಂದ್ರ ತೇಜಸ್ವಿ

3) ದೇವನೂರು ಮಹಾದೇವ

ಆ) ಕೆಳಗಿನ ಪ್ರಶ್ನೆಗಳನ್ನು **ಒಂದು** ವಾಕ್ಯದಲ್ಲಿ ಉತ್ತರಿಸಿ: 5

1) ರನ್ನಕವಿಯ ತಂದೆ-ತಾಯಿಯ ಹೆಸರೇನು?

2) 'ಮಮ್ತಾಜಳ ಮಹಲು' ಯಾರ ಕವನ ಸಂಕಲನ?

3) ಕುಳಕುಂದ ಶಿವರಾಯ ಯಾವ ಹೆಸರಿನಲ್ಲಿ ಪ್ರಸಿದ್ಧರು?

4) 'ಕುಸುಮ ಬಾಲೆ' ಯಾರ ಕೃತಿ?

5) 'ಈ ಸಾವು ನ್ಯಾಯವೇ?' ಯಾರು ಬರೆದ ಪ್ರಬಂಧ?

**********

(13)

KAN 103.4

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಬಿ.ಎಂ/ಬಿ.ಸಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2014**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

I (ಅ) **ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** 5

(1) ದನುಜಾಧೀಶ್ವರನ ಪುರಾ
ತನ ಪುಣ್ಯದ ಫಲದಿನಾಯುಧಾಗಾರದೊಳೀಂ
ಜನಿಯಿಸಿದುದೊ ವಿದ್ವಿಷ್ಟಾ
ವನಿಪಾಲಪ್ರಳಯಕಾಲಚಕ್ರಂ ಚಕ್ರಂ.

(2) ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡುವೆ ಬಡವನಯ್ಯಾ,
ಎನ್ನ ಕಾಲೇ ಕಂಭ, ದೇಹವೇ ದೇಗುಲ
ಸಿರ ಹೊನ್ನ ಕಳಸವಯ್ಯ
ಕೂಡಲ ಸಂಗಮ ದೇವ ಕೇಳಯ್ಯ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಆ) **ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 6

(1) ತೇಲಿ ಬರಲಿದೆ ನೋಡು ನಮ್ಮ ನಾಡು.

(2) ಭಾಷೆ ಕೊಟ್ಟ ಮೇಲೆ ನನ್ನ ಧರ್ಮ ಉಳಿಯೋದಿಲ್ಲ.

(3) ನಿಜ ಕುಲ ಆಚಾರಮಂ ಬಗೆದು, ಶೀಲ ಪರಿಪಾಲನಂ ಮಾಳ್ಪುದು.

ಇ) **ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಗಂಡ ಹೆಂಡತಿಯ ನಡುವೆ ಪಾತಿವ್ರತ್ಯಕ್ಕೆ ಸಂಬಂಧಿಸಿ ಭಾಷೆ ನೀಡುವುದನ್ನು ಸಂಕೆಣ್ಣು ನಿರಾಕರಿಸುವ ಬಗೆಯನ್ನು ವಿವರಿಸಿರಿ.

(2) 'ಎನಗೆ ವಿದ್ಯೋಪದೇಶಂ ಗೆಯ್ದ ಗುರು' ಕಾವ್ಯ ಭಾಗದ ಸ್ವಾರಸ್ಯವನ್ನು ನಿರೂಪಿಸಿರಿ.

ಈ) **ಒಂದು ಪ್ರಶ್ನೆಗೆ ಉತ್ತರಿಸಿರಿ** 7

(1) ವೈದೇಹಿ ಅವರು 'ವ್ಯಾನಿಟಿ ಬ್ಯಾಗು ಕೇವಲ ಒಂದು ಚೀಲವಲ್ಲ' ಎಂದು ಏಕೆ ಹೇಳಿದರು? ವಿಶ್ಲೇಷಿಸಿರಿ.

(2) 'ನಾಗಿ' ಕವನದ ಸ್ವಾರಸ್ಯ ನಿರೂಪಿಸಿರಿ.

II ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) 'ಉಡುಗೊರೆ ಎನ್ನುವುದು ಒಂದು ಸಂಸ್ಕಾರ ಸಂಬಂಧಿ ಸಂಗತಿ' ನೇಮಿಚಂದ್ರರ ಈ ಅಭಿಪ್ರಾಯವನ್ನು ವಿವೇಚಿಸಿರಿ.

(2) ಬುಲ್‌ಡೋಜರ್ ಸಂಸ್ಕೃತಿಯ ಪ್ರಯೋಜನ ಹಾಗೂ ದುಷ್ಪರಿಣಾಮಗಳನ್ನು ಕುರಿತು ಬರೆಯಿರಿ.

**ಆ) ಒಂದು ಪ್ರಶ್ನೆಗೆ ಉತ್ತರಿಸಿರಿ** **7**

(1) 'ಹುಲಿ ಹಂದಿಯ ಹೋರಾಟ' ಪ್ರಬಂಧದ ಸ್ವಾರಸ್ಯವನ್ನು ವಿವರಿಸಿರಿ.

(2) 'ಕಷ್ಟಗಳು ಬೇಡುವುದನ್ನು ಮಾತ್ರವಲ್ಲ, ಬಾಳುವುದನ್ನು ಕಲಿಸುತ್ತದೆ. ಇವನ್ನು ಎ.ಆರ್. ಮಣಿಕಾಂತ್ ಅವರ ಲೇಖನ ಹೇಗೆ ಸಾದರ ಪಡಿಸುತ್ತದೆ? ಸಮರ್ಥಿಸಿ.

**III ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **10**

(1) ಕುಕ್ಕುಟ ಪಿಶಾಚ ಬಗೆಗಿನ ತೇಜಸ್ವಿಯವರ ಅಭಿಪ್ರಾಯವೇನು? ವಿವೇಚಿಸಿ.

(2) 'ಓತಿಕ್ಯಾತ'ದ ಸುತ್ತ ತೇಜಸ್ವಿಯವರು ಹೆಣೆದ ಕಥೆಯನ್ನು ವಿವರಿಸಿರಿ.

**ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** **7**

(1) ಗಾಡ್ಲಿ ಮಂಗನ ಹಾವಳಿ ತಪ್ಪಿಸಲು ಮಾಡಿದ ಪ್ರಯೋಗದಿಂದಾದ ಪರಿಣಾಮವನ್ನು ತೇಜಸ್ವಿಯವರು ಹೇಗೆ ನಿರೂಪಿಸಿದ್ದಾರೆ?

(2) ಸೀನಪ್ಪನು 'ಅವಾಂತರದ ಸೀನಪ್ಪ' ಆಗಲು ಕಾರಣಗಳೇನು?

**IV ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **6**

(1) ಜಾಹೀರಾತುಗಳು ಎಂದರೇನು? ಜಾಹೀರಾತುಗಳ ಉದ್ದೇಶ ಮತ್ತು ಪರಿಣಾಮಗಳ ವಿವರಣೆ ನೀಡಿರಿ.

(2) ಪ್ರಬಂಧದ ಸಾಮಾನ್ಯ ಸ್ವರೂಪವನ್ನು ವಿವರಿಸಿರಿ.

**V ಅ) ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **6**

(1) ಕೆದಂಬಾಡಿ ಜತ್ತಪ್ಪ ರೈ

(2) ಉಡುಗೊರೆ

(3) ಬಸವಣ್ಣ

**ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ** **6**

(1) ಹಬ್ಬಕ್ಕೆ ತಂದ ಹರಕೆಯ ಕುರಿ ಏನನ್ನು ಮೇಯುತ್ತಿತ್ತು?

(2) 'ಎನಗೆ ವಿದ್ಯೋಪದೇಶಂ ಗೆಯ್ದಗುರು' ಯಾವ ಕಾವ್ಯದಿಂದ ಆಯ್ದ ಭಾಗ?

(3) ನಾಗಿ ಯಾರ ಮಗಳು?

(4) 'ಬೇಟೆಯ ನೆನಪುಗಳು' ಯಾರು ಬರೆದ ಕೃತಿ?

(5) ವೈದೇಹಿ ಇದು ಯಾರ ಕಾವ್ಯನಾಮವಾಗಿದೆ?

(6) 'ಪರಿಸರದ ಕತೆಗಳು' ಯಾರ ಕೃತಿ?

*****

**KAN 103.4**

**ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಬಿ.ಎಂ/ಬಿ.ಸಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2015**

**ಕನ್ನಡ ಭಾಷಾಪತ್ರಿಕೆ**

**ಸಮಯ: 3 ಘಂಟೆ** **ಅಂಕಗಳು: 80**

**I (ಅ) ಕೆಳಗಿನ ಪದ್ಯ ಭಾಗವೊಂದರ ಸಂದರ್ಭ ಸ್ವಾರಸ್ಯ ವಿವರಿಸಿ** **5**

(1) ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು,
ಇಂತಪ್ಪ ಸಂಸಾರ ಶರಧಿಯ ದಾಟಿಸಿ, ಕಾಲಾಂತಕನೇ ಕಾಯೋ
ಕೂಡಲಸಂಗಮದೇವಾ.

(2) ತಪ್ಪಿರ್ದ ಲಿಪಿಯೊಳ್ ವಕಾರಮಂ ತೊಡೆದಲ್ಲಿ ।
ಗೊಪ್ಪುವ ಯಕಾರಮಂ ಕೆಲಬಲದ ಮಾಮರದೊ ।
ಳಿಪ್ಪ ನಿರ್ಯಾಸಮಂ ತೆಗೆದು ಕಿರುವೆರಳುಗುರ್ಣೊನೆಯಿಂದೆ ತಿದ್ದಿ ಬರೆದು ॥
ಅಪ್ಪಂತೆ ಮೊದಲಿರ್ದ ಮುದ್ರೆಯಂ ಸಂಘಟಿಸಿ ।
ಕುಪ್ಪಸದ ಸೆರಗಿನೊಳ್ ಕಟ್ಟಿ ಪಳೆಯವೊಲಿರಿಸಿ ।
ಸಪ್ಪುಳಾಗದ ತೆರದೊಳೆದ್ದು ಮೆಲ್ಲನೆ ಮಂತ್ರಿಸುತೆ ತೊಲಗಿ ಬರುತಿರ್ದಳು ॥

**ಆ) ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** **6**

(1) ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ.

(2) ಗಾಳಿ ಪರಿಮಳವನಡಗಿಪುದುಂಟೆ

(3) ಪತಿಗೆ ಪ್ರತಿ ಉತ್ತರ ಕೊಡಬೇಡ ಮಡದಿ.

**ಇ) ಒಂದು ಪ್ರಶ್ನೆಗೆ ಉತ್ತರಿಸಿರಿ** **10**

(1) ಬಸವಣ್ಣನ ವಚನಗಳಲ್ಲಿ ವ್ಯಕ್ತವಾಗುವ ಭಕ್ತಿಯ ಸ್ವರೂಪದ ಕುರಿತಂತೆ ಬರೆಯಿರಿ.

(2) ಚಂದ್ರಹಾಸನಿಗೆ ವಿಷಯೆ ಒಲಿದ ಪ್ರಸಂಗದ ಕುರಿತು ವಿವರಿಸಿ.

**ಈ) ಒಂದು ಪ್ರಶ್ನೆಗೆ ಉತ್ತರಿಸಿರಿ** **7**

(1) ನೀಲೇ ಗೌಡನಿಗೆ ಸಂಕಮ್ಮ ಭಾಷೆ ನೀಡದಿರಲು ಕಾರಣವೇನು? ಮಹಿಳಾ ಸಬಲೀಕರಣದ ಹಿನ್ನೆಲೆಯಿಂದ ಚರ್ಚಿಸಿ.

(2) 'ನಾಗಿ' ಕವನದ ಆಶಯವೇನು? ವಿವರಿಸಿ.

**II ಅ) ಒಂದು ಪ್ರಶ್ನೆಗೆ ಉತ್ತರಿಸಿರಿ** **10**

(1) ಸಂಸ್ಕೃತಿ ಎಂದರೇನು? ಬುಲ್ಡೋಜರ್ ಸಂಸ್ಕೃತಿಯ ಭಾಗವಾದುದು ಹೇಗೆ? ವಿವರಿಸಿರಿ.

(2) ಹುಲಿ–ಹಂದಿಯ ಹೋರಾಟದ ಸಂದರ್ಭದ ಕುರಿತಂತೆ ಬರೆಯಿರಿ.

**ಆ) ಒಂದು ಪ್ರಶ್ನೆಗೆ ಉತ್ತರಿಸಿರಿ** **7**

(1) 'ಆತ ಕೊಟ್ಟ ವಸ್ತುವಡವೆ'ಯ ಮಹತ್ವವೇನು?

(2) ಪಟ್ರೇಸಿಯಾಳ ಬದುಕು ನಮಗೆ ಸ್ಫೂರ್ತಿಯ ಚಿಲುಮೆ ಹೇಗೆ? ವಿವರಿಸಿ.

(50) 14/10

III ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 10

(1) ಮಹಿಳಾ ಸಬಲೀಕರಣದ ಹಿನ್ನೆಲೆಯಿಂದ 'ನಮ್ಮೊಳಗಿನ ಜರೀನಾ' ಕತೆಯನ್ನು ವಿವರಿಸಿ.

(2) 'ರಾಮನ ಸವಾರಿ ಸಂತೆಗೆ ಹೋದದ್ದು' ಕತೆಯಲ್ಲಿ ಅಭಿವ್ಯಕ್ತಿಗೊಳ್ಳುವ ಕೌಟುಂಬಿಕ ಸಂಬಂಧಗಳ ಸ್ವರೂಪ ಏನು? ವಿವರಿಸಿ.

ಆ) **ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ** 7

(1) 'ಕೊನೆಯ ಗಿರಾಕಿ' ಕತೆಯ ಆಶಯವೇನು?

(2) 'ಒಂದು ಒಸಗೆ ಒಯ್ಯುವುದಿತ್ತು' ಕತೆಯ ಮಹತ್ವವನ್ನು ತಿಳಿಸಿ.

IV ಅ) **ಒಂದು ಪ್ರಶ್ನೆಗೆ ಉತ್ತರಿಸಿರಿ** 6

(1) ಜಾಹೀರಾತಿನ ಸ್ವರೂಪದ ಕುರಿತಂತೆ ಬರೆಯಿರಿ.

(2) ಪ್ರಬಂಧ ರಚನೆಯಲ್ಲಿ ಒಳಗೊಳ್ಳಬೇಕಾದ ಅಂಶಗಳು ಯಾವುವು?

V ಅ) **ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** 6

(1) ಕುವೆಂಪು

(2) ಜನಪದ ಸಾಹಿತ್ಯ

(3) ಲಕ್ಷ್ಮೀಶ

ಆ) **ಒಂದು ವಾಕ್ಯದಲ್ಲಿ ಉತ್ತರಿಸಿರಿ** 6

(1) ಕುವೆಂಪು ಅವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ?

(2) 'ಬೇಟೆಯ ನೆನಪುಗಳು' ಇದರ ಕರ್ತೃ ಯಾರು?

(3) 'ನಿರಂಜನ' ಇದು ಯಾವ ಲೇಖಕರ ಕಾವ್ಯನಾಮ?

(4) 'ಈ ಗುಲಾಬಿಯು ನಿನಗಾಗಿ' ಎಂಬ ಅಂಕಣದಲ್ಲಿ ಬರೆಯುತ್ತಿದ್ದ ಲೇಖಕ ಯಾರು?

(5) ಸಂಕಮ್ಮನ ಗಂಡನ ಹೆಸರೇನು?

(6) 'ಪ್ರಶ್ನಿಸಲಿಲ್ಲವೇಕೆ?' ಕವನ ಬರೆದವರು ಯಾರು?

*****

KAN 103.4

## ಕ್ರೆಡಿಟ್ ಆಧಾರಿತ ಪ್ರಥಮ ಸೆಮಿಸ್ಟರ್ ಬಿ.ಬಿಎ./ಬಿ.ಸಿ.ಎ. ಪದವಿ ಪರೀಕ್ಷೆ – ಅಕ್ಟೋಬರ್ 2016

## ಕನ್ನಡ ಭಾಷಾಪತ್ರಿಕೆ

**ಸಮಯ: 3 ಘಂಟೆ** **ಅಂಕಗಳು: 80**

I (ಅ) **ಕೆಳಗಿನ ಪದ್ಯ ಭಾಗವೊಂದರ ಸಂದರ್ಭ, ಸ್ವಾರಸ್ಯವನ್ನು ವಿವರಿಸಿ** 5X1=5

(1) ಅಂದಣವನೇರಿದ ಸೊಣಗನಂತೆ
ಕಂಡೊಡೆ ಬಿಡದು ಮುನ್ನಿನ ಸ್ವಭಾವವನು
ಸುಡುಸುಡು ಮನವದು ವಿಷಯಕೆ ಹರಿವುದು
ಮೃಡ ನಿಮ್ಮನನುದಿನ ನೆನೆಯಲೀಯದು
ಇಂತಪ್ಪ ಸಂಸಾರ ಶರಧಿಯನು ಪಾರುಗಾಣಿಸೋ ಕೂಡಲ ಸಂಗಮದೇವಾ॥

(2) ಇಂದು ಬಾಳಿದು ಕೂಳ ಕಾಳಿಗವು; ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ;
ಅನ್ನದನ್ಯಾಯ ದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ ದಿವದ ಬಯಕೆ!

ಆ) **ಕೆಳಗಿನ ಪದ್ಯದ ಸಾಲುಗಳಲ್ಲಿ ಎರಡರ ಸಂದರ್ಭ ಸ್ವಾರಸ್ಯ ವಿವರಿಸಿ** 2X3=6

(1) 'ನಾವು ಹಿಂದೆಗೆವೆವೆ? ವೀರ ತರುಣರು ನಾವು'

(2) 'ಯಾರೂ ಮನೆವೊಳಗೆ ಆದಲೀ ಬದಲಿಲ್ಲ'

(3) 'ಉಲ್ಲಂಘಿಸುವವರುಂಟೆ ವಿಧಿಕೃತವನು'

ಇ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 10X1=10

(1) ಬಸವಣ್ಣನ ವಚನಗಳಲ್ಲಿನ ಭಕ್ತಿಯ ಸ್ವರೂಪ ಕುರಿತು ಬರೆಯಿರಿ.

(2) ಮಹಿಳಾ ಸಬಲೀಕರಣದ ಹಿನ್ನೆಲೆಯಿಂದ 'ಮಲೆ ಮಹದೇಶ್ವರ' ಕಾವ್ಯದ ಸಂಕಮ್ಮನ ಪಾತ್ರವನ್ನು ವಿಶ್ಲೇಷಿಸಿ.

ಈ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 7X1=7

(1) ಎಂ. ಗೋಪಾಲಕೃಷ್ಣ ಅಡಿಗರು ಕಟ್ಟ ಬಯಸುವ ನಾಡಿನ ಸ್ವರೂಪ ಯಾವುದು?

(2) ಕೇಡು ಬಯಸುವವರಿಗೆ ಕೇಡೆ ಉಂಟಾಗುತ್ತದೆ ಎನ್ನುವ ಮಾತನ್ನು 'ನಾಗಿ' ಕವನದ ಹಿನ್ನೆಲೆಯಿಂದ ವಿವರಿಸಿ.

II ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ** 10X1=10

(1) 'ಉಡುಗೊರೆ'ಯ ಮಹತ್ವವನ್ನು 'ಆತ ಕೊಟ್ಟ ವಸ್ತು ಒಡವೆ, ನನಗೆ ಅವಗೆ ಗೊತ್ತು...' ಲೇಖನದ ಹಿನ್ನೆಲೆಯಿಂದ ವಿವರಿಸಿ.

(2) ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡ ಪಟ್ರೇಶಿಯಾಳ ಹೋರಾಟದ ಜೀವನ ಕುರಿತಂತೆ ಬರೆಯಿರಿ.

ಆ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) 'ಬುಲ್ಡೋಜರ್' ನಮ್ಮ ಸಂಸ್ಕೃತಿಯ ಭಾಗ ಆಗುವ ಕುರಿತಂತೆ ಲೇಖಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ಬರೆಯಿರಿ.

(2) 'ಹುಲಿ-ಹಂದಿಗಳ ಕಾದಾಟ' ಪ್ರಬಂಧದ ಸ್ವಾರಸ್ಯ ವಿವರಿಸಿ.

III ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **10X1=10**

(1) 'ಕೊನೆಯ ಗಿರಾಕಿ' ಕಥೆಯ ಮೂಲಕ ತೆರೆದುಕೊಳ್ಳುವ ಸಮಾಜದ ವಿಕಾರಗಳನ್ನು ವಿವರಿಸಿ.

(2) 'ರಾಮನ ಸವಾರಿ ಸಂತೆಗೆ ಹೋದದ್ದು' ಕಥೆಯ ಮಹತ್ವವೇನು? ವಿವರಿಸಿ.

ಆ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **7X1=7**

(1) 'ನಮ್ಮೊಳಗಿನ ಜರೀನ'ಳನ್ನು ಕಂಡುಕೊಳ್ಳುವ ರೀತಿಯನ್ನು ಕಥೆಯು ಹೇಗೆ ವಿವರಿಸುತ್ತದೆ?

(2) ಕೌಟುಂಬಿಕ ಸಂಬಂಧಗಳ ಮಹತ್ವ 'ಒಂದು ಒಸಗೆ ಒಯ್ಯುವುದಿತ್ತು' ಕಥೆಯಲ್ಲಿ ಹೇಗೆ ಮೂಡಿಬಂದಿದೆ?

IV ಅ) **ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಸಂಕ್ಷಿಪ್ತ ಪ್ರಬಂಧ ರೂಪದಲ್ಲಿ ಉತ್ತರಿಸಿರಿ** **6X1=6**

(1) ಪ್ರಬಂಧ ಎಂದರೇನು? ವಿವರಿಸಿ.

(2) ಮಾರುಕಟ್ಟೆ ನಿರ್ವಹಣೆಯಲ್ಲಿ ಜಾಹೀರಾತುಗಳ ಪಾತ್ರವೇನು?

V ಅ) **ಕೆಳಗಿನ ಪ್ರಶ್ನೆಗಳಲ್ಲಿ ಎರಡನ್ನು ಟಿಪ್ಪಣಿ ರೂಪದಲ್ಲಿ ಉತ್ತರಿಸಿ.** **3X2=6**

(1) ಜಾಹೀರಾತಿನ ವೈವಿಧ್ಯ

(2) ಪ್ರಬಂಧ

(3) ಕುವೆಂಪು

ಆ) **ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ/ಪದದಲ್ಲಿ ಉತ್ತರಿಸಿರಿ** **6X1=6**

(1) ಬಸವಣ್ಣನವರ ವಚನಗಳ ಅಂಕಿತ ಏನು?

(2) 'ಚೂತವನ ಚೈತ್ರ' ಬಿರುದುಳ್ಳ ಕವಿ ಯಾರು?

(3) 'ಇರುವುದೊಂದೆ ಭೂಮಿ' ಈ ಕೃತಿಯ ಕರ್ತೃ ಯಾರು?

(4) 'ಬೇಟೆಯ ನೆನಪುಗಳು' ಇದು ಯಾರ ಕೃತಿ?

(5) ಜಾಹೀರಾತಿನಲ್ಲಿ ಘೋಷವಾಕ್ಯ ಎಂದರೇನು?

(6) ಪ್ರಬಂಧ ಶಬ್ದದ ಮೂಲವನ್ನು ಯಾವ ಭಾಷೆಯಲ್ಲಿ ಗುರುತಿಸಲಾಗುತ್ತದೆ?

*****